# ಕರ್ನಾಟಕ ವಿಧಾನ ವಿಧಾನ ಪರಿಷತ್ತು

**ಶ್ರೀ ಕೆ. ಪ್ರತಾಪ ಸಿಂಹ ನಾಯಕ್ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ರವರ ನಿಯಮ-72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಕುರಿತು:**

## ವಿಷಯ:

ರಾಜ್ಯದಲ್ಲಿ "ಕೃಷಿ ಯಂತ್ರಧಾರೆ" ಮಹತ್ವಾಕಾಂಕ್ಷಿ ಯೋಜನೆ ಸೂಕ್ತ ಅನುದಾನದ ಕೊರತೆಯಿಂದಾಗಿ ಗ್ರಹಣ ಹಿಡಿದಿದ್ದು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತೀವ್ರ ತೊಂದರೆಯಾಗಿದೆ. ಬಹುತೇಕ ಕೃಷಿ ಯಂತ್ರಧಾರೆ ಕೇಂದ್ರಗಳು ಸೂಕ್ತ ನಿರ್ವಹಣೆ ಇಲ್ಲದೆ ಮತ್ತು ಸರ್ಕಾರದಿಂದ ಸರಿಯಾದ ಆರ್ಥಿಕ ನೆರವು ದೊರೆಯದೆ ಸ್ಥಗಿತಗೊಂಡಿವೆ.

ಕಡಿಮೆ ಬಾಡಿಗೆಯಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುತ್ತಿದ್ದ ಈ ಕೇಂದ್ರಗಳು ಸ್ಥಗಿತಗೊಂಡಿರುವುದರಿಂದ, ಸಣ್ಣ ಮತ್ತು ಅತೀ ಸಣ್ಣ ರೈತರು ಸಂಕಷ್ಟಕ್ಕೆ ಸಿಲುಕಿರುವುದನ್ನು ತಪ್ಪಿಸಲು ಸರ್ಕಾರ ಸಕಾಲದಲ್ಲಿ ಯಾವುದೇ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಕೃಷಿ ಸಚಿವರ ಗಮನ ಸೆಳೆಯಬಯಸುತ್ತೇನೆ.

## ಉತ್ತರ:

2014-15ನೇ ಸಾಲಿನಿಂದ ಕೃಷಿ ಯಂತ್ರಧಾರೆ ಯೋಜನೆಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಸದರಿ ಯೋಜನೆಯಡಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಖಾಸಗಿ ಸೇವಾದಾರ ಸಂಸ್ಥೆಗಳೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿರುತ್ತದೆ.

2014-15 ನೇ ಸಾಲಿನಲ್ಲಿ ಸ್ಥಾಪಿಸಿದ್ದ ಕೃಷಿ ಯಂತ್ರಧಾರೆ ಕೇಂದ್ರಗಳ ಒಡಂಬಡಿಕೆ 6 ವರ್ಷಗಳ ಅವಧಿಯನ್ನು ಮತ್ತೆ 3 ವರ್ಷಗಳಿಗೆ ವಿಸ್ತರಿಸಿದ ಒಟ್ಟು 9 ವರ್ಷಗಳ ಒಡಂಬಡಿಕೆಯ ಅವಧಿಯು 2022-23ನೇ ಸಾಲಿಗೆ ಅಂತ್ಯ ಗೊಂಡಿರುತ್ತದೆ. 2015-16 ಮತ್ತು 2016-17 ನೇ ಸಾಲುಗಳಲ್ಲಿ ಸ್ಥಾಪಿಸಿದ್ದ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ಮಾಡಿದ 6 ವರ್ಷಗಳ ಒಡಂಬಡಿಕೆ ಅವಧಿಯು 2021-22 ನೇ ಸಾಲಿಗೆ ಅಂತ್ಯಗೊಂಡಿದ್ದು ಮುಂದುವರೆಸಲು ಇಚ್ಛಿಸಿರುವುದಿಲ್ಲ. ನಂತರದ ವರ್ಷಗಳಲ್ಲಿ ಇನ್ನುಳಿದ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

ಕೃಷಿ ಯಂತ್ರಧಾರೆ ಯೋಜನೆ ಸ್ಥಾಪಿಸಲಾದ ಸಮಯದಲ್ಲಿ ಕೃಷಿ ಯಂತ್ರೋಪಕರಣಗಳ ಕೊರತೆಯಿದ್ದ ಕಾರಣ ಆರಂಭದಲ್ಲಿ ಬಹಳ ಮಹತ್ವಪೂರ್ಣವಾದ ಯೋಜನೆಯಾಗಿತ್ತು ಹಾಗೂ ಕೃಷಿ ಯಂತ್ರಧಾರೆ ಕೇಂದ್ರದ ಕೃಷಿ ಯಂತ್ರೋಪಕರಣಗಳಿಗೆ ಹೆಚ್ಚಿನ ಬೇಡಿಕೆಯೂ ಸಹ ಇತ್ತು. ಆದರೆ ಕಳೆದ 10 ವರ್ಷಗಳಲ್ಲಿ ಕೃಷಿ ಇಲಾಖೆಯು ರಾಜ್ಯದಲ್ಲಿ ರೈತರಿಗೆ ವ್ಯಾಪಕವಾಗಿ ಕೃಷಿ ಯಂತ್ರೋಪಕರಣಗಳನ್ನು ಸಹಾಯಧನದಡಿ ವಿತರಿಸಲಾಗಿರುತ್ತದೆ ಇದಲ್ಲದೆ ಹಲವಾರು ರೈತರುಗಳು ಸಹಾಯಧನ ಪಡೆಯದೇ ನೇರವಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವ ನೂತನ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಿರುತ್ತಾರೆ. ರೈತರುಗಳಲ್ಲಿರುವ ಕೃಷಿ ಯಂತ್ರೋಪಕರಣಗಳನ್ನು ಸ್ವಂತಕ್ಕೆ ಉಪಯೋಗಿಸುವುದಲ್ಲದೆ ತಮ್ಮ ಸುತ್ತ ಮುತ್ತಲಿನ ರೈತರುಗಳಿಗೂ ಸಹ ಬಾಡಿಗೆ ನೀಡುವುದು ವಾಡಿಕೆ. ಇದರಿಂದ, ಬಾಡಿಗೆ ಆಧಾರದ ಮೇಲೆ ರೈತರಲ್ಲಿರುವ ಕೃಷಿ ಯಂತ್ರೋಪಕರಣಗಳ ಲಭ್ಯತೆ ವರ್ಷದಿಂದ ವರ್ಷಕ್ಕೆ ಹೆಚ್ಚಿದಂತೆ ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿರುವ ಕೃಷಿ ಯಂತ್ರೋಪಕರಣಗಳಿಗೆ ಬೇಡಿಕೆಯೂ ಸಹ ದಿನೇ ದಿನೇ ಕಡಿಮೆಯಾಗಿರುತ್ತದೆ.

ಸಾಮಾನ್ಯವಾಗಿ ಟ್ರ್ಯಾಕ್ಟರ್ ಒಳಗೊಂಡಂತೆ ವಿವಿಧ ಕೃಷಿ ಯಂತ್ರೋಪಕರಣಗಳ ಉಪಯೋಗಿತ(ಬಳಕೆಯ) ಅವಧಿಯು 05 ರಿಂದ 07 ವರ್ಷಗಳಾಗಿರುತ್ತದೆ. ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಉಪಯೋಗಿಸಿದ್ದಲ್ಲಿ ಇವುಗಳ ಉಪಯೋಗಿತ ಅವಧಿಯು ಇನ್ನೂ ಕಡಿಮೆಯಾಗುತ್ತದೆ. ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿರುವ ಕೃಷಿ ಯಂತ್ರೋಪಕರಣಗಳು 5 ವರ್ಷಕ್ಕೂ ಹಳೆಯದಾಗಿದ್ದು, ಹೆಚ್ಚಿನ ಯಂತ್ರೋಪಕರಣಗಳು ದುರಸ್ತಿಯನ್ನು ಮಾಡಿಸಲಾಗದೇ ಅನುಪಯುಕ್ತವಾಗಿರುತ್ತವೆ. ಕೃಷಿ ಯಂತ್ರೋಪಕರಣಗಳು ಹಳೆಯ ಮಾದರಿಗಳಾಗಿದ್ದು, ಈಗ ರೈತರು ನವೀಕೃತ, ನೂತನ ಹೈಟೆಕ್ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಉಪಯೋಗಿಸಲು ಆಸಕ್ತಿ ತೋರಿಸುತ್ತಿರುವುದರಿಂದ ಕೃಷಿ ಯಂತ್ರಧಾರೆ ಕೇಂದ್ರದಲ್ಲಿರುವ ಸುಸಜ್ಜಿತವಾದ ಟ್ರಾಕ್ಟರ್ ಹಾಗೂ ಕೃಷಿ ಯಂತ್ರೋಪಕರಣಗಳಿಗೂ ಸಹ ಬೇಡಿಕೆ ಇಲ್ಲದಾಗಿದ್ದು ಕೃಷಿ ಯಂತ್ರಧಾರೆ ಕೇಂದ್ರಗಳು ನಷ್ಟ ಅನುಭವಿಸುವಂತಾಗಿರುತ್ತದೆ.

ಇದರಿಂದ, ಕೃಷಿ ಯಂತ್ರಧಾರೆ ಕೇಂದ್ರಗಳನ್ನು ನಿರ್ವಹಿಸುತ್ತಿರುವ ಸೇವಾದಾರ ಸಂಸ್ಥೆಗಳು (ಮೆ|| ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯನ್ನು ಒಳಗೊಂಡಂತೆ) ವ್ಯಾಪಕವಾದ ನಷ್ಟವನ್ನು ಅನುಭವಿಸಿದ್ದು, ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಮುಂದುವರೆಸಲು ಆಸಕ್ತಿ ತೋರುತ್ತಿಲ್ಲ.

ಹೆಚ್ಚಿನ ಸೇವಾದಾರ ಸಂಸ್ಥೆಗಳು, ಒಡಂಬಡಿಕೆ ಅವಧಿಯ ನಂತರ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಮುಂದುವರೆಸಲು ಇಚ್ಛಿಸದಿರುವುದಿಂದ ಸದರಿ ಕೇಂದ್ರಗಳನ್ನು ಆಸಕ್ತಿಯುಳ್ಳ ರೈತ ಉತ್ಪಾದಕ ಸಂಸ್ಥೆಗಳಿಗೆ/ ಗ್ರಾಮೀಣ ಜೀವನಾಧಾರ ಅಭಿಯಾನ (National Rural Livelihoods Mission-NRLM) ಸಂಘಗಳಿಗೆ ಅಥವಾ ಇತರೇ ಆಸಕ್ತಿಯುಳ್ಳ ಸಂಘ ಸಂಸ್ಥೆಗಳಿಗೆ ಸದರಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಹಸ್ತಾಂತರಿಸಲು ಕ್ರಮಕೈಗೊಳ್ಳಲಾಗಿರುತ್ತದೆ. ಆದರೆ, ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಪಡೆಯಲು / ಹಸ್ತಾಂತರಿಸಿಕೊಳ್ಳಲು ಸಹ ಹೆಚ್ಚಿನ ಸಂಖ್ಯೆಯಲ್ಲಿ ಸಂಘ ಸಂಸ್ಥೆಗಳು ಅಸಕ್ತಿತೋರದೆ ಇರುವುದು ಕಂಡು ಬಂದಿರುತ್ತದೆ.

ಈ ಎಲ್ಲಾ ಪರಿಸ್ಥಿತಿಯನ್ನು ಪರಿಗಣಿಸಿ, ಸದರಿ ಯೋಜನೆಯಡಿ ಸ್ಥಾಪಿಸಲಾದ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಚಾಲ್ತಿಯಲ್ಲಿಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1. ಒಡಂಬಡಿಕೆ ಅವಧಿಯ ನಂತರವೂ ಮುಂದುವರೆಸಲು ಇಚ್ಛಿಸುವ ಸಂಸ್ಥೆಗಳು ನಿರ್ವಹಿಸುತ್ತಿರುವ ಕೇಂದ್ರಗಳಲ್ಲಿರುವ ಅನುಪಯುಕ್ತ ವಸ್ತುಗಳನ್ನು ಹರಾಜು ಹಾಕಿ ಹರಾಜಿನ ಮೊತ್ತವನ್ನು ಅದೇ ಕೇಂದ್ರಕ್ಕೆ ಹೊಸ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಕೇಂದ್ರಗಳನ್ನು ಸದೃಡಗಳಿಸಲು ಅವಕಾಶ ಕಲ್ಪಿಸಲಾಗಿದೆ.
2. 2015-16 ಮತ್ತು 2016-17 ನೇ ಸಾಲುಗಳಲ್ಲಿ ಸ್ಥಾಪಿಸಿದ ಕೃಷಿ ಯಂತ್ರಧಾರೆ ಕೇಂದ್ರಗಳಿಗೆ ಮಾಡಿದ 6 ವರ್ಷಗಳ ಒಡಂಬಡಿಕೆ ಅವಧಿಯು 2021-22 ನೇ ಸಾಲಿಗೆ ಅಂತ್ಯಗೊಂಡಿದ್ದು, ಮುಂದುವರೆಸಲು ಇಚ್ಛಿಸದಿರುವ ಕಾರಣ ಹಾಗೂ ಅಸಮರ್ಪಕವಾಗಿ ನಿರ್ವಹಿಸುತ್ತಿರುವ ಕೇಂದ್ರಗಳನ್ನು ಇತರೇ ಆಸಕ್ತಿಯುಳ್ಳ ಸೇವಾದಾರ ಸಂಸ್ಥೆ/ಸಂಘ ಸಂಸ್ಥೆಗಳಿಗೆ ಹಸ್ತಾಂತರಿಸಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಉಪಕರಣ ಸಮಿತಿಗೆ ಅಧಿಕಾರವನ್ನು ನೀಡಲಾಗಿರುತ್ತದೆ. ಅದರನ್ವಯ ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಇತರೇ ಆಸಕ್ತಿಯುಳ್ಳ ಸೇವಾದಾರ ಸಂಸ್ಥೆ / ಸಂಘ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿರುತ್ತದೆ.
3. ಮೆ|| ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯವರು ಸರ್ಕಾರ ಒದಗಿಸಿದ ಸಹಾಯಧನಕ್ಕಿಂತಲೂ ಹೆಚ್ಚಿನ ಮೊತ್ತದ ಕೃಷಿ ಯಂತ್ರೋಪಕರಣಗಳನ್ನು ಸ್ವಂತ ಹಣದಿಂದಲೇ ಖರೀದಿಸಿ ಒಂಬತ್ತು ವರ್ಷಗಳ ಕಾಲ ಸತತವಾಗಿ ರೈತರಿಗೆ ಸೇವೆ ಒದಗಿಸಿರುವ ಹಿನ್ನೆಲೆಯಲ್ಲಿ, ಸದರಿ ಸಂಸ್ಥೆಯವರು ಸ್ಥಾಪಿಸಿರುವ ಕೇಂದ್ರಗಳಲ್ಲಿ ಮುಂದುವರೆಸಲು ಇಚ್ಛಿಸದಿರುವ ಕೇಂದ್ರಗಳಲ್ಲಿರುವ ಅನುಪಯುಕ್ತ ಯಂತ್ರೋಪಕರಣಗಳನ್ನು ಹರಾಜು ಹಾಕಿ

ಹಾಗೂ ಆ ಕೇಂದ್ರಗಳಲ್ಲಿರುವ ಉಪಯುಕ್ತ ಯಂತ್ರೋಪಕರಣಗಳನ್ನು ಮುಂದುವರೆಸಲು ಇಚ್ಛಿಸಿರುವ ಕೇಂದ್ರಗಳಿಗೆ ವರ್ಗಾಯಿಸಲು ಅನುಮತಿಸಲಾಗಿರುತ್ತದೆ.

4. ಒಡಂಬಡಿಕೆ ಅವಧಿಯಲ್ಲಿಯೇ ಅಸಮರ್ಪಕವಾಗಿ ನಿರ್ವಹಿಸುತ್ತಿರುವ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಕೃಷಿ ಇಲಾಖೆಯ ಸುಪರ್ದಿಗೆ ವಹಿಸಿಕೊಂಡು ಇತರೆ ಆಸಕ್ತಿಯುಳ್ಳ ಸಂಸ್ಥೆಗಳಿಗೆ ಹಸ್ತಾಂತರಿಸಲು ಸೂಚಿಸಲಾಗಿರುತ್ತದೆ.

ಒಟ್ಟಾರೆಯಾಗಿ, ಕೃಷಿ ಯಂತ್ರಧಾರೆ ಯೋಜನೆಯನ್ನು ಆರಂಭಿಸಿದ 2014-15 ನೇ ಸಾಲಿನಲ್ಲಿರುವಂತಹ ಪರಿಸ್ಥಿತಿಗಿಂತಲೂ ಪ್ರಸ್ತುತ ಕೃಷಿ ಸನ್ನಿವೇಶಗಳು ಭಿನ್ನವಾಗಿರುವುದರಿಂದ ಹಾಗೂ ರೈತರ ಬೇಡಿಕೆ ಬದಲಾಗಿರುವುದರಿಂದ ಕೃಷಿ ಯಂತ್ರಧಾರೆ ಯೋಜನೆಯ ಕೃಷಿ ಯಂತ್ರಧಾರೆ ಕೇಂದ್ರಗಳು ಪರಿಣಾಮಕಾರಿಯಾಗಿ ರೈತರಿಗೆ ಸೇವೆ ಒದಗಿಸಲು ಹಾಗೂ ಸುಸ್ಥಿರವಾಗಿ ಕಾರ್ಯನಿರ್ವಹಿಸಲು ಹಾಗೂ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ನೀಡುವುದರಲ್ಲಿ ಕೃಷಿ ಯಂತ್ರಧಾರೆ ಕೇಂದ್ರಗಳು ರೈತರೊಂದಿಗೆ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಲು ಸಹ ಕಷ್ಟಸಾಧ್ಯವಾಗಿರುತ್ತದೆ.

ಈ ಎಲ್ಲಾ ಅಂಶಗಳನ್ನು ಮನಗಂಡು ಪ್ರಸ್ತುತ ಸ್ಥಿತಿಯಲ್ಲಿ ಸರ್ಕಾರವು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು 2023-24ನೇ ಸಾಲಿನಿಂದ ಪ್ರಾರಂಭಿಸಲಾಗಿರುತ್ತದೆ. ಇದರ ಪ್ರಮುಖ ಪ್ರಯೋಜನೆಗಳು ಇಂತಿವೆ.

1. ರೈತರು ಸ್ವಂತಕ್ಕೆ ಖರೀದಿಸಿ ನಿರ್ವಹಿಸಲು ಕಷ್ಟಸಾಧ್ಯವಿರುವ ದೊಡ್ಡ ನೂತನ ಹೈಟೆಕ್ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಒದಗಿಸಲಾಗುತ್ತದೆ.
2. ಇದರಲ್ಲಿ ಕಂಬೈನ್ಡ್ ಹಾರ್ವೆಸ್ಟರ್ ಮತ್ತು ಕಬ್ಬು ಕಟಾವು ಯಂತ್ರಗಳಿಗೆ ಹಾಗೂ ಕೊಯಿಲುಗೆ ಪೂರಕವಾದ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನವನ್ನು ನೀಡಲಾಗುತ್ತಿದೆ.
3. ಪ್ರತಿ ಹಬ್‌ಗೆ ಸಂಘ ಸಂಸ್ಥೆಗಳಿಗೆ/ಪ.ಜಾತಿ /ಪ.ಪಂಗಡದ ರೈತರಿಗೆ ಶೇ.70, ಗರಿಷ್ಟ ರೂ.50.00 ಲಕ್ಷ ಮತ್ತು ಇತರ ವರ್ಗದ ರೈತರಿಗೆ ಶೇ.50 ಗರಿಷ್ಟ ರೂ.40.00 ಲಕ್ಷ ಸಹಾಯಧನವನ್ನು Credit Linked Back ended subsidy ಮುಖಾಂತರ ಸಹಾಯಧನವನ್ನು ನೇರವಾಗಿ ಫಲಾನುಭವಿಯ ಸಾಲದ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು. ಇದಕ್ಕೆ ಕೃಷಿ ಮೂಲಭೂತ ಸೌಕರ್ಯ ನಿಧಿಯಿಂದ ಬಡ್ಡಿ ಸಹಾಯಧನವನ್ನು ಪಡೆಯಬಹುದಾಗಿರುತ್ತದೆ.
4. ಇದರಲ್ಲಿ ವೈಯುಕ್ತಿಕ ರೈತರು, ರೈತ ಉತ್ಪಾದಕ ಸಂಸ್ಥೆಗಳಿಗೆ/ ಗ್ರಾಮೀಣ ಜೀವನಾಧಾರ ಅಭಿಯಾನ (National Rural Livelihoods Mission-NRLM) ಸಂಘಗಳಿಗೆ ಅಥವಾ ಇತರೇ ಆಸಕ್ತಿಯುಳ್ಳ ಸಂಘ ಸಂಸ್ಥೆಗಳಿಗೆ ಸಹಾಯಧನವನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.
5. ಬೇಡಿಕೆಯನುಸಾರ ಅಗತ್ಯವಿರುವ ಪ್ರದೇಶಗಳಿಗೆ ಸಂಚರಿಸಬಹುದಾಗಿದೆ.

ಇಲ್ಲಿಯವರೆಗೆ 340 ಹೈಟೆಕ್ ಹಾರ್ವೆಸ್ಟರ್ ಹಬ್‌ಗಳಿಗೆ ಸಹಾಯಧನವನ್ನು ಒದಗಿಸಲಾಗಿರುತ್ತದೆ.

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು**

ಸಂಖ್ಯೆ: **AGRI/111/ASC/2025**